**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಗಿರಿ.**

**ಸಿಸಿ ನಂ. 932/2024**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರು** |
|---|---|---|
| ಸಂತೆಬೆನ್ನೂರು ಪೊಲೀಸ್ ಠಾಣೆ. | | 1. ರಘು ಯಾನೆ ರಾಘವೇಂದ್ರ ಎಸ್<br>ಬಿನ್ ಶೇಖರಪ್ಪ,<br>ವಯಸ್ಸುಃ 33 ವರ್ಷ,<br>ಉದ್ಯೋಗಃ ಲೇಬರರ್,<br>ವಾಸಃ ಚಿಕ್ಕಬ್ಬಿಗೆರೆ ಗ್ರಾಮ,<br>ಚನ್ನಗಿರಿ ತಾಲ್ಲೂಕು.<br>2. ಮಾರಪ್ಪ<br>ಬಿನ್ ಹನುಮಂತಪ್ಪ,<br>ವಯಸ್ಸುಃ 80 ವರ್ಷ,<br>ಉದ್ಯೋಗಃ ಜಿರಾಯ್ತಿ,<br>ವಾಸಃ ಮೆದಿಕೆರೆ ಗ್ರಾಮ,<br>ಚನ್ನಗಿರಿ ತಾಲ್ಲೂಕು.<br>3. ರಂಗಸ್ವಾಮಿ<br>ಬಿನ್ ಮಾರಪ್ಪ,<br>ವಯಸ್ಸುಃ 45 ವರ್ಷ,<br>ಉದ್ಯೋಗಃ ಜಿರಾಯ್ತಿ,<br>ವಾಸಃ ಮೆದಿಕೆರೆ ಗ್ರಾಮ,<br>ಚನ್ನಗಿರಿ ತಾಲ್ಲೂಕು.<br>4. ಹನುಮಂತಪ್ಪ<br>ಬಿನ್ ಮಾರಪ್ಪ,<br>ವಯಸ್ಸು 40 ವರ್ಷ,<br>ಉದ್ಯೋಗಃ ಜಿರಾಯ್ತಿ,<br>ವಾಸಃ ಮೆದಿಕೆರೆ ಗ್ರಾಮ,<br>ಚನ್ನಗಿರಿ ತಾಲ್ಲೂಕು. |

5. ಸಂತೋಷ
ಬಿನ್ ಶೇಖರಪ್ಪ,
ವಯಸ್ಸು 40 ವರ್ಷ,
ಉದ್ಯೋಗಃ ಜಿರಾಯ್ತಿ,
ವಾಸಃ ಚಿಕ್ಕಬ್ಬಿಗೆರೆ ಗ್ರಾಮ,
ಚನ್ನಗಿರಿ ತಾಲ್ಲೂಕು.

:: **ದೋಷಾರೋಪಣೆ** ::

ನಾನು ಶ್ರೀಮತಿ. ಮಹಾಲಕ್ಷ್ಮಿ ಜಿ. ಎಂ.ಎ., ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ, ಈ ಮೇಲ್ಕಂಡ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ದಿನಾಂಕ 21.06.2023 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಮೆದಿಕೆರೆ ಸರ್ವೆ ನಂ.141 ರಲ್ಲಿನ ಚಾಸಾ.2 ರವರಿಗೆ ಸೇರಿದ 4 ಎಕರೆ 36 ಗುಂಟೆ ಜಮೀನಿನಲ್ಲಿ 1 ರಿಂದ 5 ನೇ ಆರೋಪಿತರು ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ 149 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಎರಡನೇಯದಾಗಿ, ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಬಂದು ಚಾಸಾ.1 ರವರ ಜೊತೆ ಗಲಾಟೆ ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 147 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಮೆದಿಕೆರೆ ಸರ್ವೆ ನಂ.141 ರಲ್ಲಿನ ಚಾಸಾ.2 ರವರಿಗೆ ಸೇರಿದ 4 ಎಕರೆ 36 ಗುಂಟೆ ಜಮೀನಿಗೆ ಅಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ

ಭಾ.ದಂ.ಸಂ.ಕಲಂ. 447 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವಿರಿ?

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ.1 ರವರಿಗೆ ಏನೆ ಸೂಳೆಮುಂಡೆ ಆದರಗಿತ್ತಿ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 504 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವಿರಿ?

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಈ ಜಮೀನು ತನಗೆ ಸೇರಿದ್ದು ಎಂದು ಚಾಸಾ.1 ರವರು ತೊಟ್ಟಿದ್ದ ಸೀರೆಯನ್ನು ಹಿಡಿದು ಎಳೆದಾಡಿ ಕುಂದುಂಟಾಗುವಂತೆ ವರ್ತಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ.354 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಆರನೇಯದಾಗಿ ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 4 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಕೋಲಿನಿಂದ ಚಾಸಾ.2 ರವರ ಮುಖಕ್ಕೆ, ತಲೆಗೆ, ಕಾಲಿಗೆ, ಎದೆಗೆ, ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 324 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಏಳನೇಯದಾಗಿ ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 4 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ.1 ರವರಿಗೆ ಕೈಕಾಲುಗಳಿಂದ ಹೊಟ್ಟೆಗೆ ಹೊಡೆದು, 1 ರಿಂದ 5 ನೇ ಆರೋಪಿತರಾದ ನೀವು ಚಾಸಾ.1 ಮತ್ತು 2 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 323 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಕೊನೇಯದಾಗಿ ಮೇಲೆ ತಿಳಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ರಿಂದ 5 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ.1, 2 ರವರಿಗೆ ಈ ಜಮೀನಿಗೆ ಬಂದರೆ ನಿಮ್ಮನ್ನು ಜೀವಂತವಾಗಿ ಬಿಡುವುದಿಲ್ಲ ಪ್ರಾಣ ತೆಗೆಯುತ್ತೇವೆ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ. 506 ಸಹವಾಚಕ ಕಲಂ.149 ರಂತೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಒಳಗೆ ಎಸಗಿರುವಿರಿ ಎಂದು ಅಪಾದಿಸಲಾಗಿದೆ?

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

**ದಿನಾಂಕಃ 17.04.2026** ಸಹಿ/-

**ಸ್ಥಳಃ ಚನ್ನಗಿರಿ.**

**ಸಿ/ಸಿ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಮ್‌ಎಫ್‌ಸಿ ನ್ಯಾಯಾಲಯ, ಚನ್ನಗಿರಿ.**